ಕೂಡ ಯಾವ ಸಚಿವರು ಕೂಡ ಅಲ್ಲಿಗೆ ಬಂದು ವಸ್ತುಸ್ಥಿತಿಯನ್ನು ನೋಡಲು ತಯಾರಿಲ್ಲ. ಕೇವಲ ಅಧಿಕಾರಿಗಳು ಕೊಟ್ಟ ಮಾಹಿತಿಯನ್ನೇ ಆದರಿಸಿ ದಯಮಾಡಿ ಉತ್ತರ ಹೇಳದೇ ಒಂದು ಬಾರಿ ಅಲ್ಲಿಗೆ ಬಂದು ನೋಡಬೇಕೆಂದು ವಿನಂತಿ.

ಅಧ್ಯಕ್ಷರು : ಮುನಿಯುಪ್ಪನವರೆ, ನೀವು ಒಂದು ಬಾರಿ ಅಲ್ಲಿಗೆ ಹೋಗಿ ನೋಡಿ.

ಶ್ರೀ ವಿ. ಮುನಿಯಪ್ಪ : ಅಧ್ಯಕ್ಷರೆ, ಖಂಡಿತ ಅಲ್ಲಿಗೆ ಭೇಟಿ ಕೊಡೋಣ.

ಮಾಗಡಿ ತಾಲ್ಲೂಕಿನಲ್ಲಿ ಅಭಿವೃದ್ಧಿ ಕಾಮಗಾರಿ.

551 - ಶ್ರೀ ರೇವಣ್ಣ . ಹೆಚ್.ಎಂ. (ಮಾಗಡಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1999-2000ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಮಂಜೂರಾಗಿರುವ ಹಣ ಎಷ್ಟು? ಕಾಮಗಾರಿಗಳಾವುವು?

ಆ) ಇವುಗಳಲ್ಲಿ ಪೂರ್ಣಗೊಂಡ ಕಾಮಗಾರಿಗಳು ಎಷ್ಟು?

ಇ) ಬಾಕಿ ಇರುವ ಕಾಮಗಾರಿಗಳು ಎಷ್ಟು?

ಈ) ಮಾಗಡಿ ತಾಲ್ಲೂಕಿನಲ್ಲಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ? ಎಷ್ಟು ಬಾಕಿ ಇರುತ್ತದೆ? ಖರ್ಚಾಗಿರುವ ಹಣವೆಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಪರಿಶಿಷ್ಟ ಜಾತಿಯುವರಿಗಾಗಿ ಕರ್ನಾಟಕ ಪರಿಶಿಷ್ಟ ಜಾತಿ /ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಮುಖಾಂತರ 1999-2000ನೇ ಸಾಲಿನಲ್ಲಿ ಒಟ್ಟು 38 ಸಿವಿಲ್ ಕಾಮಗಾರಿಗಳಿಗಾಗಿ ಒಟ್ಟು ರೂ. 21.94 ಲಕ್ಷಗಳನ್ನು ಮಂಜೂರು ಮಾಡಿದೆ.

ಕಾಮಗಾರಿಗಳ ವಿವರ ಅನುಬಂಧ-1 ರಲ್ಲಿ ನೀಡಲಾಗಿದೆ.

ಆ) 38 ಕಾಮಗಾರಿಗಳು ಪೂರ್ಣಗೊಂಡಿವೆ.

ಇ) ಉದ್ಭವಿಸುವುದಿಲ್ಲ.

ಈ) ಮಾಗಡಿ ತಾಲ್ಲೂಕಿನಲ್ಲಿ 1999-2000ನೇ ಸಾಲಿನಲ್ಲಿ ಮಂಜೂರಾದ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿವೆ. ಬಾಕಿ ಇರುವುದಿಲ್ಲ. ಒಟ್ಟು ರೂ.2.28 ಲಕ್ಷಗಳು ಖರ್ಚಾಗಿರುತ್ತದೆ.

ಅನುಬಂಧ - 1

1999-2000ನೇ ಸಾಲಿನಲ್ಲಿ ಬೆಂಗಳೂರು (ಗ್ರಾ) ಜಿಲ್ಲೆಗೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿಗಳ ವಿವರ

ಕ್ರಂ. ಸಂ.	ಕಾಮಗಾರಿ ಸಂಖ್ಯೆ	ಗ್ರಾಮದ ಹೆಸರು	ತಾಲ್ಲೂಕು	ಮಂಜೂರಾದ ಹಣ	ಖರ್ಚಾದ ಮೊತ್ತ	ಷರಾ
01.	89	ಬಿಣಚುಕಲ್ಲುದೊಡ್ಡಿ	ಕನಕಪುರ	37,000	32,480	ಪೂರ್ಣಗೊಂಡಿದೆ.
02.	48	ಟಿ. ಗೊಲ್ಲಹಳ್ಳಿ	"	-	-	"
03.	90	ಚಾಕಸಂದ್ರ	"	31,000	24,936	"
04.	92	ತುಳಸಿದೊಡ್ಡಿ	"	1,17,335	99,253	"
05.	142	ಚಿಕ್ಕಸಂದ್ರ	"	38,000	34,494	"
06.	144	ಅರ್ಜುನಹಳ್ಳಿ	"	39,000	34,296	"
07.	173	ತುಳಸಿದೊಡ್ಡಿ	"	31,000	29,109	"
08.	31	ಚಾಕಸಂದ್ರ	"	26,000	21,051	"
09.	136	ಚಿಕ್ಕಣ್ಣನವಲಸೆ	"	39,000	31,794	"
10.	143	ಜಕ್ಕಸಂದ್ರ	"	42,000	33,512	"
11.	139	ಕಡವೆಕೆರೆದೊಡ್ಡಿ	"	1,25,000	85,674	"
12.	78	ಬಿಸಕೂರು	ಮಾಗಡಿ	48,000	25,966	"
13.	26	ಎಲ್ಲಾಪುರ	"	20,000	13,587	"
14.	81	ಕಣ್ಣಾನೂರುಪಾಳ್ಯ	"	1,27,000	89,299	"
15.	94	ಹೊನ್ನಾಪುರಪಾಳ್ಯ	"	49,000	45,997	"
16.	77	ಮಲ್ಲಿಗುಂಟ	"	35,000	24,629	"
17.	114	ಹೆಲಿಗೆಹಳ್ಳಿಕಾಲೋನಿ	"	-	-	"
18.	147	ಚಾಡಿಬೇಗೂರು	"	32,000	29,496	"
19.	38	ಎಲಚಿಪಾಳ್ಯ	"	51,000	40,987	ಪೂರ್ಣಗೊಂಡಿದೆ.
20.	40	ಕದರಮಂಗಲ	ಚನ್ನಪಟ್ಟಣ	1,62,000	1,20,613	"

ಕ್ರಂ. ನಂ.	ಕಾಮಗಾರಿ ಸಂಖ್ಯೆ	ಗ್ರಾಮದ ಹೆಸರು	ತಾಲ್ಲೂಕು	ಮಂಜೂರಾದ ಹಣ	ಖರ್ಚಾದ ಮೊತ್ತ	ಷರಾ
21.	108	ಓಬಳಾಪುರ	ನೆಲಮಂಗಲ	48,000	32,342	"
22.	103	ತಟ್ಟಿಕೆರೆ	"	1,56,000	1,38,081	"
23.	101	ಕುಲುವನಹಳ್ಳಿ	"	1,18,000	95,331	"
24.	106	ದಾಸೇನಹಳ್ಳಿ	"	97,000	77,224	"
25.	61	ಕೋಳಿಗೆರೆ	ದೊಡ್ಡಬಳ್ಳಾಪುರ	31,000	20,860	"
26.	155	ಮಾಕಳಿ	"	1,10,500	86,681	"
27.	121	ಅಪಕಾರನಹಳ್ಳಿ	"	1,07,000	96,278	"
28.	154	ಸುತ್ತಳ್ಳಿತಾಂಡ	"	1,09,000	1,02,147	"
29.	62	ನಾರಾಯಣಕೆರೆ	ಹೊಸಕೋಟೆ	34,000	27,460	"
30.	179	ಅಪ್ಪಸಂದ್ರ	"	62,000	59,704	"
31.	175	ಗೋವಿಂದಪುರ	"	16,700	14,203	"
32.	178	ಗೊಟ್ಟಿಪುರ	"	36,000	28,740	"
33.	149	ವಡ್ಡರಹಳ್ಳಿ	ಹೊಸಕೋಟೆ	50,000	45,263	"
34.	183	ನಿಡಘಟ್ಟ	"	26,000	20,258	"
35.	180	ಹೊಸದಿಂಬಹಳ್ಳಿ	"	12,000	10,591	"
36.	161	ಅಂಬಲೀಪುರ	"	53,400	42,803	"
37.	87	ಗಂಗಾಧರ ಚೌಡೇನಹಳ್ಳಿ	ದೇವನಹಳ್ಳಿ	31,000	25,659	"
38.	140	ಐಬಿನಾಪುರ	"	48,000	38,397	"

01. 1999-2000ನೇ ಸಾಲಿನಲ್ಲಿ ಮಂಜೂರಾತಿ ಪಡೆದ ಕಾಮಗಾರಿಗಳ ಸಂಖ್ಯೆ : 38

02. ಮಂಜೂರಾದ ಹಣ ರೂ. 21,94,935-00

03. ಪೂರ್ಣಗೊಂಡ ಕಾಮಗಾರಿಗಳು 38

04. ಬಾಕಿ ಇರುವ ಕಾಮಗಾರಿಗಳು ಇಲ್ಲ

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊಳವೆ ಬಾವಿಯನ್ನು ತನ್ನ ಜಮೀನಿನಲ್ಲಿ ತೆಗೆದ ವ್ಯಕ್ತಿ ಬೇರೆ ಜಮೀನಿಗೂ ನೀರನ್ನು ಹಾಯಿಸಲು ಕಷ್ಟವಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಬಗ್ಗೆ ಹೇಳಬೇಕು. ಇನ್ನು ಮಾನ್ಯ ಸಚಿವರೇ ಖುದ್ದಾಗಿ ಬಂದು ನೋಡಿರುವ ಹಾಗೆ ಇನ್ನೂ ಎರಡು ಕಾಮಗಾರಿಗಳು ಅಲ್ಲಿ ಪೂರ್ಣಗೊಳ್ಳಬೇಕಾಗಿದೆ. ಈ ಕಾಮಗಾರಿಗಳನ್ನು ತೆಗೆದು ಕೊಂಡಿರುವುದರಲ್ಲೂ ಇಲಾಖಾ ತಾರತಮ್ಯವಾಗಿದೆ. ಏಕೆಂದರೆ ಮೊದಲು ಈ ಕಾಮಗಾರಿಯನ್ನು ಜಿಲ್ಲಾ ಪಂಚಾಯತ್‌ನವರು ತೆಗೆದುಕೊಂಡಿದ್ದರು. ಆಮೇಲೆ ಇದನ್ನು ಎಸ್.ಸಿ /ಎಸ್‌ಟಿ ಕಾರ್ಪೊರೇಷನ್‌ನವರು ತೆಗೆದುಕೊಂಡಿರುವುದರಿಂದ ಇವೆರಡರ ಮಧ್ಯೆ ಇನ್ನು ಎರಡು ಕಾಮಗಾರಿಗಳು ಅಪೂರ್ಣವಾಗಿದೆ. ಸೇವಾನಗರದಲ್ಲಿ ಕೊಳವೆ ಬಾವಿಯನ್ನು ಕೊರೆದಿದ್ದರೂ ಕೂಡ 1995ರಿಂದಲೂ ಇನ್ನು ಮೋಟರನ್ನು ಒದಗಿಸಿಲ್ಲ. ಆದುದರಿಂದ ನಿಂತಿರುವ ಕಾಮಗಾರಿಯನ್ನು ಪೂರ್ಣಗೊಳಿಸುವ ಕೆಲಸವನ್ನು ಸರ್ಕಾರ ಮಾಡಬೇಕು. ಇನ್ನು ಈಗಾಗಲೇ ಕಾಮಗಾರಿಗಳಲ್ಲಿ ಉಪಯೋಗಿಸಿರುವ ಮೋಟರ್ ಮತ್ತು ಪೈಪುಗಳು ಬಹಳ ಕಳಪೆ ಮಟ್ಟದವುಗಳಾಗಿವೆ ಎಂಬ ಬಗ್ಗೆ ದೂರು ಬಂದಿರುವುದರಿಂದ ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಅಲ್ಲಿ ಈಗಾಗಲೇ 38 ಕಾಮಗಾರಿಗಳನ್ನು ಪೂರ್ಣ ಮಾಡಿದ್ದೇವೆ. ಅಲ್ಲಿ ಏನಾದರೂ ಕಳಪೆ ಗುಣಮಟ್ಟದ ಸಾಮಗ್ರಿಗಳನ್ನು ಬಳಸಿ ತೊಂದರೆಯಾಗಿದ್ದರೆ ಅದರ ಬಗ್ಗೆ ನಾನು ತನಿಖೆ ಮಾಡಿಸುತ್ತೇನೆ. ಆದರೆ ಪೂರ್ಣಗೊಂಡಿರುವ 38 ಕಾಮಗಾರಿಗಳಲ್ಲಿ ಯಾವ ಕಾಮಗಾರಿಗಳಲ್ಲಿ ಕಳಪೆ ಗುಣಮಟ್ಟದ ಸಾಮಗ್ರಿಗಳನ್ನು ಬಳಸಿದ್ದಾರೆ ಎಂಬ ಬಗ್ಗೆ ಮಾಹಿತಿಯನ್ನು ಸದಸ್ಯರು ಕೊಟ್ಟರೆ ತನಿಖೆ ಮಾಡಿಸಲು ಅನುಕೂಲವಾಗುತ್ತದೆ. ಆದರೂ ಕೂಡ ಸಂಬಂಧಪಟ್ಟ ವಿಚಾರದಲ್ಲಿ ಅಧಿಕಾರಿಗಳನ್ನು ಕಳುಹಿಸಿ ಪರಿಶೀಲನೆ ಮಾಡಿಸುತ್ತೇನೆ. ಅಲ್ಲಿ ಏನಾದರೂ ತಪ್ಪಾಗಿದ್ದರೆ ಸಂಬಂಧಪಟ್ಟವರ ಮೇಲೆ ಉಗ್ರ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಇನ್ನು ಜಿಲ್ಲಾಪಂಚಾಯತ್‌ನವರು ಗಂಗಾ ಕಲ್ಯಾಣ ಯೋಜನೆ ಮಾಡಿದ್ದರೆ ಅದು ನನ್ನ ವ್ಯಾಪ್ತಿಗೆ ಬರುವುದಿಲ್ಲ. 1995ರಲ್ಲಿ ಬಹುಶಃ ಜಿಲ್ಲಾ ಪಂಚಾಯತ್ ವತಿಯಿಂದ ಮಾಡಿರಬಹುದು. ಈಗಲೂ ಕೂಡ ಜಿಲ್ಲಾ ಪಂಚಾಯತ್‌ನಲ್ಲಿ ವಿಶೇಷ ಘಟಕದ ಯೋಜನೆಯ ಹಣ ಇದೆ. ಮಾನ್ಯ ಸದಸ್ಯರು ಪ್ರಯತ್ನ ಪಟ್ಟರೆ ಆ ಜಿಲ್ಲಾ ಪಂಚಾಯತ್ ಹಣದಿಂದಲೇ ಅದನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗಬಹುದು. ಆದರೆ ಬಾವಿ ತೋಡಿ ಇನ್ನೂ ಪಂಪ್ ಹಾಕದೇ ಹೋಗಿದ್ದರೆ ಮುಫತ್ತಾಗಿ ಪಂಪ್‌ಗಳನ್ನು ಕೊಡಿಸಬೇಕೆಂದು ನಾನು ಆಲೋಚನೆಯನ್ನು ಮಾಡಿದ್ದೇನೆ. ಆ ಕೆಲಸವನ್ನು ನಾನು ಮಾಡಿಸಿಕೊಡುತ್ತೇನೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಗಂಗಾ ಕಲ್ಯಾಣ ಯೋಚನೆಯಲ್ಲಿ ಎಸ್‌ಸಿ/ ಎಸ್‌ಟಿ ಹಾಗೂ ಹಿಂದುಳಿದ ವರ್ಗಗಳ ಫಲಾನುಭವಿಗಳನ್ನು ಆಯ್ಕೆ ಮಾಡಲು ಒಂದು ಸಮಿತಿಯನ್ನು ಮಾಡಿದ್ದಾರೆ. ಈ ಸಮಿತಿಗೆ ಎಕ್ಸಿಕ್ಯುಟೀವ್ ಅಫೀಸರನ್ನು ಅಧ್ಯಕ್ಷರನ್ನಾಗಿ ಮಾಡಿ ಶಾಸಕರನ್ನು ಸದಸ್ಯರನ್ನಾಗಿ ಮಾಡಲಾಗಿದೆ. ಇದು ಶಾಸಕರಿಗೆ ಅವಮಾನಕರವಾದ ವಿಚಾರವಾಗಿದೆ. ಈಗ ಹಾಲಿ ಇರುವ ಬಗರ್‌ಹುಕುಂ

ಸಾಗುವಳಿ ಸಮಿತಿ, ಆಶ್ರಯ ಸಮಿತಿ ಹಾಗೂ ಆರಾಧನ ಸಮಿತಿಗಳಿಗೆಲ್ಲದಕ್ಕೂ ಶಾಸಕರೇ ಅಧ್ಯಕ್ಷರಾಗಿರುತ್ತಾರೆ. ಈ ಸಮಿತಿಗೆ ಸಂಬಂಧಪಟ್ಟ ತಾಲ್ಲೂಕು ಮಟ್ಟದ ಅಧಿಕಾರಿ ಕಾರ್ಯದರ್ಶಿ ಅಥವಾ ಸದಸ್ಯರಾಗಿರುತ್ತಾರೆ. ಆದರೆ ಈಗ ಸಮಾಜ ಕಲ್ಯಾಣ ಸಚಿವರು ಮಾಡಿರುವ ಸಮಿತಿಯಲ್ಲಿ ಎಕ್ಸಿಕ್ಯುಟೀವ್ ಆಫೀಸರ್ ಅಧ್ಯಕ್ಷರನ್ನಾಗಿ ಶಾಸಕರನ್ನಾಗಿ ಸದಸ್ಯರನ್ನಾಗಿ ಮಾಡಿರುವುದರಿಂದ ಶಾಸಕರಿಗೆ ಅವಮಾನವಾದಂತೆಯೇ ಆಗುವುದರಿಂದ ಆ ಸಮಿತಿಯನ್ನು ತೆಗೆದುಬಿಡುವುದೇ ಉತ್ತಮ. ಸಚಿವರು ಬೇಕಾದರೆ ಕೇವಲ ಅಧಿಕಾರಿಗಳನ್ನೊಳಗೊಂಡಂತೆ ಮಾತ್ರ ಸಮಿತಿಯನ್ನು ಮಾಡಲಿ. ಅದನ್ನು ಮಾಡುವುದಕ್ಕಾಗುವುದಿಲ್ಲವೆಂದರೆ ಸಮಿತಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ತಾಲ್ಲೂಕು ಪಂಚಾಯಿತಿ ಕಾರ್ಯಾನಿರ್ವಾಹಕರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿರುವುದು ನಿಜ. ಈ ಹಿಂದೆ ಇದು ನಮ್ಮ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ಇತ್ತು. ಆದರೆ ಸಕಾಲದಲ್ಲಿ ಫಲಾನುಭವಿಗಳ ಆಯ್ಕೆ ಆಗದೇ ಇರುವುದು ಗಮನಕ್ಕೆ ತಂದಾಗ ಇದನ್ನು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಆ ಸಮಿತಿಯಲ್ಲಿ ನಮ್ಮ ಶಾಸಕರನ್ನು ಸದಸ್ಯರನ್ನಾಗಿ ಮಾಡಿದ್ದೇವೆ. ಹಿಂದೆ ಶಾಸಕರು ಸಮಿತಿಯಲ್ಲಿ ಇರಲಿಲ್ಲ. ನಮ್ಮ ಉದ್ದೇಶ ಏನೆಂದರೆ ಬಹಳ ತಾಲ್ಲೂಕಿನಿಂದ ಫಲಾನುಭವಿಗಳ ಆಯ್ಕೆ ಪಟ್ಟಿ ಇನ್ನು ನಮಗೆ ಬಂದಿಲ್ಲ.

ಅಧ್ಯಕ್ಷರು : ತಿಮ್ಮಪ್ಪನವರೇ, ತಾವು ಆ ಸಮಿತಿಯಲ್ಲಿ ಶಾಸಕರನ್ನು ಸದಸ್ಯರನ್ನಾಗಿ ಮಾಡಿ, ಎಕ್ಸಿಕ್ಯೂಟೀವ್ ಆಫೀಸರ್ ಅನ್ನು ಚೇರ್‌ಮೆನ್ ಆಗಿ ಮಾಡುವುದು ಯಾವ ನ್ಯಾಯ?

(ಗೊಂದಲ)

ಒಬ್ಬ ಸದಸ್ಯರು : ಎಕ್ಸಿಕ್ಯೂಟೀವ್ ಆಫೀಸರ್ ಅನ್ನು ಅಧ್ಯಕ್ಷರನ್ನಾಗಿ ಮಾಡಿರುವುದನ್ನು ಬದಲಾವಣೆ ಮಾಡಬೇಕು.

ಅಧ್ಯಕ್ಷರು : ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ, ಎಕ್ಸಿಕ್ಯುಟೀವ್ ಆಫೀಸರ್ ಅನ್ನು ಸದಸ್ಯರನ್ನಾಗಿ ಮಾಡಿ. ಆಫೀಸರ್ಸ್ ಹತ್ತಿರ ನಾವು ಹೋಗಿ ಕುಳಿತುಕೊಳ್ಳಬೇಕೇ ಎನ್ನುವುದು ಸದಸ್ಯರೆಲ್ಲರ ಒತ್ತಾಯವಿದೆ, ದಯವಿಟ್ಟು ಇದನ್ನು ಚೇಂಜ್ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ : ಮಾಡುತ್ತೇವೆ.

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಪ್ರಾರಂಭವಾದಂತಹ ಕೆಲಸಗಳು ಜಿಲ್ಲಾ ಪಂಚಾಯಿತಿ ಮತ್ತು ಎಸ್‌ಸಿ / ಎಸ್‌ಟಿ ಕಾರ್ಪೊರೇಷನ್ ಅವರಿಬ್ಬರ ಮಧ್ಯದಲ್ಲಿ ನಿಂತುಹೋಗಿರುವ ಕೆಲಸಗಳು ಒಂದೆರಡಲ್ಲ. ಬಹಳ ಇವೆ. ಅವುಗಳನ್ನು ಇವರು ತೆಗೆದುಕೊಳ್ಳುವುದಿಲ್ಲ. ಅವರು ತೆಗೆದುಕೊಳ್ಳುವುದಿಲ್ಲ. ಜಿಲ್ಲಾಪಂಚಾಯಿತಿಯವರು ಒಂದು ಕೆಲಸವಾದರೆ ಮಾಡಬಹುದು. ಆ ಜಿಲ್ಲಾ ಪಂಚಾಯಿತಿಯವರು ಟ್ಯಾಕಲ್ ಮಾಡಿ ನಿಂತುಹೋಗಿವೆ. ಎಸ್‌ಸಿ / ಎಸ್‌ಟಿ ಕಾರ್ಪೊರೇಷನ್‌ನವರು ನಾವು ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತಾರೆ. ಈ

ರೀತಿಯ ದ್ವಂದ್ವ ನೀತಿಯಿಂದ ದಲಿತ ವರ್ಗದ ಜನರಿಗೆ ತೊಂದರೆಯಾಗಿದೆ. ಅದುದರಿಂದ ಅದನ್ನು ಸಮಾಜ ಕಲ್ಯಾಣ ಇಲಾಖೆಯಿಂದ ತೆಗೆದುಕೊಂಡು ಮಾಡಬೇಕು. ಏಕೆಂದರೆ, ಸ್ಕೀಂ ಆಗಿದ್ದು ಏಜೆನ್ಸಿ ಜಿಲ್ಲಾಪರಿಷತ್ತಿನಿಂದ ಮಾಡುತ್ತಿದ್ದರೆ ಹೊರತು ಅವರೆ ಕಾರ್ಯಕ್ರಮವಲ್ಲ. ಆ ಕಾರ್ಯಕ್ರಮ ಸಮಾಜ ಕಲ್ಯಾಣ ಇಲಾಖೆಯದು ಇದೆ. ಆ ಏಜೆನ್ಸಿಗೋಸ್ಕರ ಅವರು, ಇವರು ಮಾಡಬೇಕು, ಎನ್ನುವುದನ್ನು ಮಾನ್ಯ ಮಂತ್ರಿಯವರು ಸರಿಪಡಿಸಬೇಕು. ಆ ಕೆಲಸ ಮುಗಿಸುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ : ಅದರಲ್ಲಿ ದ್ವಂದ್ವ ಏನಿಲ್ಲ. ಅದನ್ನು ಜಿಲ್ಲಾ ಪಂಚಾಯತ್‌ನವರು ಮಾಡಿಕೊಳ್ಳುತ್ತಾರೆ. ತಮ್ಮಲ್ಲಿ ಇರತಕ್ಕಂಥ ದುಡ್ಡಿನಲ್ಲಿ ಹತ್ತು ಕೆಲಸವನ್ನು ತೆಗೆದುಕೊಳ್ಳುವುದರ ಬದಲು ಒಂದು ಪೂರ್ಣವಾದ ಕೆಲಸವನ್ನು ಮಾಡಿದ್ದರೆ ಆಗುತ್ತಿತ್ತು. ಐದು ಲಕ್ಷ ರೂಪಾಯಿ ಇದ್ದರೆ ಹತ್ತು ಕೆಲಸ ಮಾಡುವುದು. ಇದರಿಂದ ಯಾವುದು ಪೂರ್ಣವಾಗುವುದಿಲ್ಲ. ಆದುದರಿಂದ ಅವು ಅಲ್ಲೆ ಹಾಗೆ ಬಿದ್ದಿದ್ದೆ. ಆದುದರಿಂದ, ಜಿಲ್ಲಾ ಪಂಚಾಯತ್‌ನಲ್ಲಿ ಇರತಕ್ಕಂಥ ವಿಶೇಷ ಘಟಕ ಯೋಜನೆ ಹಣವನ್ನು ಕೂಡ ಸ್ವಲ್ಪ ಮಟ್ಟದಲ್ಲಿ ಕ್ರೊಢೀಕರಣ ಮಾಡಿಕೊಂಡು ನಮ್ಮ ಘಟಕಗಳನ್ನು ಪರಿಪೂರ್ಣವಾದಂತಹ ರೀತಿಯಲ್ಲಿ ಚುನಾಯಿಸಿಕೊಂಡು ಮಾಡುವ ಒಂದು ತೀರ್ಮಾನ ಮಾಡಬೇಕೆಂದು ಆಲೋಚನೆ ಮಾಡಿ, ಅದರ ಬಗ್ಗೆ ಚರ್ಚೆ ಕೂಡ ಮಾಡಿದ್ದೇವೆ. ಆದುದರಿಂದ ಜಿಲ್ಲಾ ಪಂಚಾಯತ್‌ನವರು ಪ್ರಾರಂಭ ಮಾಡಿರತಕ್ಕಂಥ ಕೆಲಸವನ್ನು ಪೂರ್ಣಗೊಳಿಸುವುದಕ್ಕೆ ಜಿಲ್ಲಾ ಪಂಚಾಯತ್‌ನವರೇ ಮಾಡಬೇಕು. ಒಂದು ವೇಳೆ ಏನಾದರೂ ಕಾರಣಗಳಿದ್ದರೆ ನಾನು ಅದನ್ನು ಪರಿಶೀಲನೆ ಮಾಡಿ ನೋಡುತ್ತೇನೆ. ಈ ಗಂಗಾ ಕಲ್ಯಾಣ ಯೋಜನೆಯಲ್ಲಿ ವೈಯಕ್ತಿಕವಾಗಿ ಹಾಗೂ ಗುಂಪು ಫಲಾನುಭವಿಗಳಿಗೆ ಬಹಳಷ್ಟು ಅನುಕೂಲ ಮಾಡಿದ್ದೇವೆ. ನಾನು ಎಲ್ಲಾ ಶಾಸಕರಿಗೆ ಕೂಡ ಪತ್ರ ಬರೆದು, ಇವು ಯಾವ ಪ್ರಮಾಣದಲ್ಲಿ ಕೆಲಸ ಮಾಡುತ್ತಿವೆ, ಅವುಗಳನ್ನು ಪರೀಕ್ಷೆ ಮಾಡಿ, ಅದರಲ್ಲಿ ಏನಾದರೂ ಲೋಪದೋಷಗಳು ಇದ್ದರೆ ಅವನ್ನು ಗುರುತಿಸಿ ಬರೆದರೆ, ಮುಂದೆ ಅಲ್ಲಿ ಲೋಪವಾಗದೆ ಇರುವ ರೀತಿಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂದು ಹೇಳಿದ್ದೇನೆ. ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ, ಅವರವರ ಕ್ಷೇತ್ರದಲ್ಲಿ ಇರತಕ್ಕಂಥ ಗಂಗಾ ಕಲ್ಯಾಣ ಯೋಜನೆಯ ಬಗ್ಗೆ, ಅವರಿಗೆ ಆಗದಿದ್ದರೂ, ಅವರ ಪ್ರತಿನಿಧಿಗಳಾದರೂ ಅಧಿಕಾರಿಗಳ ಜೊತೆ ಹೋದರೆ ಮುಂದೆ ವ್ಯಾಪಕವಾದಂತಹ ಒಂದು ಕಾರ್ಯಕ್ರಮ ರೂಪಿಸುವುದಕ್ಕೆ ಇದರಿಂದ ಸಹಾಯಕವಾಗುತ್ತದೆಂದು ಹೇಳುತ್ತೇನೆ.

ಶ್ರೀ ಮುನಿನರಸಿಂಹಯ್ಯ : ಮಾನ್ಯ ಅಧ್ಯಕ್ಷರೆ, ಗಂಗಾ ಕಲ್ಯಾಣ ಯೋಜನೆಯಲ್ಲಿ 38 ಯೋಜನೆಗಳನ್ನು ಮಂಜೂರು ಮಾಡಿದ್ದು, ಅದರಲ್ಲಿ ನನ್ನ ದೇವನಹಳ್ಳಿ ಕ್ಷೇತ್ರಕ್ಕೆ ಕೇವಲ ಇಬ್ಬರು ಫಲಾನುಭವಿಗಳನ್ನು ಮಾತ್ರ ಈ ಯೋಜನೆಯಲ್ಲಿ ಆಯ್ಕೆ ಮಾಡಿದ್ದಾರೆ. ಬೇರೆ ಕ್ಷೇತ್ರಗಳಿಗೆ ಹತ್ತು ಹನ್ನೆರಡು ಫಲಾನುಭವಿಗಳನ್ನು ಕೊಟ್ಟಿರುವುದು ನ್ಯಾಯಸಮ್ಮತವಲ್ಲ. ನನ್ನಲ್ಲಿ 120 ಅರ್ಜಿಗಳು ಗಂಗಾ ಕಲ್ಯಾಣ ಯೋಜನೆಯ ಅವಕಾಶಕ್ಕೆ ಬಂದಿರುವುದು ಬಾಕಿ ಉಳಿದಿದೆ. ನಾನು ಇಲಾಖೆ ಅಧಿಕಾರಿಗಳನ್ನು ಭೇಟಿ ಮಾಡಿದಾಗ ದೇವನಹಳ್ಳಿ ಮತ್ತು ಹೊಸಕೋಟೆ ಕ್ಷೇತ್ರಗಳು ಡಾರ್ಕ್ ಏರಿಯಾ ಎಂದು ಘೋಷಣೆಯಾಗಿದೆ ಎಂದು ಹೇಳುತ್ತಾರೆ. ಸರ್ಕಾರ ಈ ರೀತಿ ಯಾವಾಗ ಆದೇಶ ಮಾಡಿದರು. ಒಂದು

ಕಡೆ ರೈತರು ಕೂರೆಯುವಂತಹ ಬೋರ್‌ವೆಲ್‌ನಲ್ಲಿ ಉತ್ತಮವಾದಂತಹ ನೀರು ಸಿಗುತ್ತದೆ. ಆದರೆ ನಮ್ಮ ಪರಿಶಿಷ್ಟ ಜಾತಿಯವರಿಗೆ ಅವರು ಬದುಕುವುದಕ್ಕೆ ಸರ್ಕಾರ ಒಂದು ಯೋಜನೆಯನ್ನು ಮಂಜೂರು ಮಾಡತಕ್ಕಂಥ ಸಂದರ್ಭದಲ್ಲಿ ಇಲಾಖೆಯಿಂದ ದೇವನಹಳ್ಳಿಯಲ್ಲಿ ಇಬ್ಬರು ಫಲಾನುಭವಿಗಳಿಗೆ ಕೊಡತಕ್ಕಂಥ ಕೆಲಸವಾಗಿದೆ. ಆದರೆ ಕನಕಪುರ, ಮಾಗಡಿ ಕ್ಷೇತ್ರದಲ್ಲಿ ಹೆಚ್ಚಿಗೆ ಕೊಡತಕ್ಕಂಥ ಕೆಲಸವಾಗಿದ್ದು, ಈ ತಾರತಮ್ಯ ಏಕೆ ಆಗಿದೆ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ರಾಜ್ಯದಲ್ಲಿ ತಾರತಮ್ಯ ಆಗಿರತಕ್ಕಂಥಾದ್ದು ನಿಜ. ಏಕೆಂದರೆ ಪ್ರತಿಯೊಂದು ತಾಲ್ಲೂಕಿಗೂ ಕೂಡ ಟಾರ್ಗೆಟ್ ನಿಗದಿ ಪಡಿಸಿರಲಿಲ್ಲ. ಯಾರ್ಯಾರಿಗೆ ಅವಕಾಶ ಸಿಕ್ಕಿತ್ತು ಅವರು ತಮ್ಮ ತಮ್ಮ ಕ್ಷೇತ್ರದಲ್ಲಿ ಲಾಭ ಮಾಡಿಕೊಂಡಿದ್ದಾರೆ. ಆದುದರಿಂದ ಈ ತಾರತಮ್ಯ ಆಗಬಾರದು ಎನ್ನುವ ಕಾರಣಕ್ಕೆ ನಮ್ಮ ಆಯವ್ಯಯದಲ್ಲಿ ಎಷ್ಟು ಹಣ ಇತ್ತು ಅದನ್ನೆಲ್ಲಾ ತಾಲ್ಲೂಕಿಗೆ ಸಮಾನವಾಗಿ ಹಂಚಿರುವುದರಿಂದ ಅದು ಕಡಿಮೆಯಾಗಿದೆ. ಹಣ ದೊರೆತ ಸಂದರ್ಭದಲ್ಲಿ ಇನ್ನು ಹೆಚ್ಚು ಕೊಡುತ್ತೇವೆ.

ಅಧ್ಯಕ್ಷರು : ಇಲ್ಲಿ ಒಂದು ಪ್ರಶ್ನೆ. ಎಲ್ಲಿ ಎಸ್‌ಸಿ ಪಾಪ್ಯುಲೇಷನ್ ಜಾಸ್ತಿ ಇದೆ ಅಲ್ಲಿ ಹೆಚ್ಚು ಕೊಡಿ.

ಶ್ರೀ ಮುನಿ ನರಸಿಂಹಯ್ಯ : ಕೋಲಾರದಲ್ಲಿ 34 ಪರ್ಸೆಂಟ್ ಎಸ್‌ಸಿ. ಪಾಪ್ಯುಲೇಷನ್ ಇದೆ. ಮಂಡ್ಯದಲ್ಲಿ 14 ಪರ್ಸೆಂಟ್ ಇದೆ. ಕೋಲಾರ ಹಾಗೂ ಮಂಡ್ಯದಲ್ಲಿ ಇರುವಂತಹ ಕ್ಷೇತ್ರಗಳಿಗೆ ಒಂದೆ ರೀತಿ ಕೊಟ್ಟರೆ ಹೇಗೆ? ಹೆಚ್ಚಿಗೆ ಪಾಪ್ಯುಲೇಶನ್ ಇರುವ ಕಡೆ ಅಷ್ಟೆ ಪ್ರಮಾಣದಲ್ಲಿ ಕೊಟ್ಟರೆ ಹೇಗೆ? ನಮ್ಮ ಕ್ಷೇತ್ರಕ್ಕೆ ಎರಡು ಕೊಟ್ಟಿದ್ದು, ಅದನ್ನು ಕೊಡುವುದಕ್ಕೆ ನಮಗೆ ಬಹಳ ಕಷ್ಟವಾಗಿದೆ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ನಾವು ರಿಸರ್ವ್ ಕಾನ್‌ಸ್ಟಿಟ್ಯುಯೆನ್ಸಿಯಿಂದ ಬಂದಿರತಕ್ಕಂಥವರು. ಇವರು ಎಲ್ಲಾ ಕ್ಷೇತ್ರಗಳಿಗೆ ಕೊಟ್ಟಹಾಗೆ ನಮಗೆ ಕೊಟ್ಟರೆ ನಾವು ಹೇಗೆ ಕೊಡುವುದು. ವರ್ಷಕ್ಕೆ ಎರಡೆರಡು ಜನರಿಗೆ ಕೊಟ್ಟರೆ ನಾವು ಎಷ್ಟು ಜನರನ್ನು ಉದ್ದಾರ ಮಾಡುವುದಕ್ಕೆ ಆಗುತ್ತದೆ. ಇವತ್ತು ಅವರು ಬದುಕುವುದಕ್ಕೆ ಒಳ್ಳೆಯ ಪ್ರೋಗ್ರಾಂ ಅದು. ಜಮೀನಿನಲ್ಲಿ ನೀರು ಬಂದರೆ ಅವರು ಬದುಕುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ಒಂದು ವಿಶೇಷವಾದಂತಹ ಯೋಜನೆ ಇಟ್ಟು, ಬೇರೆ ಬೇರೆ ಕಡೆಯಿಂದ ಸಾಲ ತಂದು ಪ್ರೋಗ್ರಾಂ ಹಾಕಿಕೊಂಡಿದ್ದಾರೆ. ಇವರು ಸಹ ಆ ಜನಾಂಗಗಳ ಅಭಿವೃದ್ಧಿಗೆ ಒಂದು ವಿಶೇಷವಾದಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡು ಒಂದೊಂದು ಕ್ಷೇತ್ರಕ್ಕೆ 50-60 ಫಲಾನುಭವಿಗಳಿಗೆ ಅನುಕೂಲ ಮಾಡಿಕೊಡುವುದಕ್ಕೆ ಅವಕಾಶ ಮಾಡಿದರೆ ಅವರ ಅಭಿವೃದ್ಧಿಯಾಗುತ್ತದೆ. ಅದನ್ನು ಮಾಡುವುದಕ್ಕೆ ಏನಾದರೂ ಹೊಸ ಯೋಜನೆಗಳನ್ನು ಹಮ್ಮಿಕೊಂಡಿದ್ದೀರಾ? ಎಸ್‌ಸಿ ಕ್ಷೇತ್ರಕ್ಕೆ ಹೆಚ್ಚಿಗೆ ಕೊಡತಕ್ಕಂಥ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ನಾರ್ತ್ ಕೆನರಾದಲ್ಲಿ ಶೇಕಡ ಎಂಟರಷ್ಟು ಎಸ್‌ಸಿ ಪಾಪ್ಯುಲೇಷನ್ ಇದ್ದಾರೆ ಸೌತ್ ಕೆನರಾದಲ್ಲಿ ಒಂಭತ್ತು ಪರ್ಸೆಂಟ್, ಮಂಡ್ಯದಲ್ಲಿ 12 ಪರ್ಸೆಂಟ್, ಹೊಸ ಕೋಟೆಯಲ್ಲಿ 12 ಪರ್ಸೆಂಟ್ ಪಾಪ್ಯುಲೇಷನ್ ಇದೆ. ನಮ್ಮ ಜಿಲ್ಲೆಯಲ್ಲಿ 25 ರಿಂದ 35 ಪರ್ಸೆಂಟ್‌ನವರೆಗೂ ಇದ್ದಾರೆ.

ನಮ್ಮ ತಾಲ್ಲೂಕಿನಲ್ಲಿ 36 ಪರ್ಸೆಂಟ್ ಎಸ್‌ಸಿ ಜನಾಂಗ ಇದ್ದು ಅಲ್ಲಿಗೆ ಕೇವಲ ಮೂರು ಫಲಾನುಭವಿಗಳನ್ನು ಆಯ್ಕೆ ಮಾಡಿ ಕೊಡಬೇಕೆಂದು ಬಂದಿದೆ. ಆದುದರಿಂದ ಎಲ್ಲೆಲ್ಲಿ ಆ ಜಾನಂಗದವರು ಜಾಸ್ತಿ ಇದ್ದಾರೆ ಅದನ್ನು ನೋಡಿ ಆ ಪ್ರಕಾರ ಡಿವೈಡ್ ಮಾಡಿ ಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಪ್ರಜಾಸಂಖ್ಯೆ ಆಧಾರದ ಮೇಲೆ ಹಂಚುವ ವಿಚಾರದಲ್ಲಿ ನನ್ನದೇನು ಭಿನ್ನಾಭಿಪ್ರಾಯವಿಲ್ಲ. ಏನಾದರೂ ವ್ಯತ್ಯಾಸ ಇದ್ದರೆ ಅದನ್ನು ಸರಿಪಡಿಸುವ ಕೆಲಸ ಮಾಡುತ್ತೇನೆ. ಈ ಸಾರಿ ಕಡಿಮೆ ಏಕೆ ಬಂತೆಂದರೆ ಹಿಂದೆ ಮಾಡಿರತಕ್ಕಂಥ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಾದರೆ ಕ್ರೋಢೀಕೃತ ಗೊಳಿಸಿರತಕ್ಕಂಥ ಹಣವನ್ನು ಸಂಪೂರ್ಣವಾಗಿ ನಾವು ಬಳಸಿಕೊಳ್ಳತಕ್ಕಂಥ ಸಂದರ್ಭ ಬಂತು. ಹಾಗಾಗಿ ಈ ವರ್ಷದ ಆಯವ್ಯಯದಲ್ಲಿ ಹೆಚ್ಚು ಕೊಡುವುದಕ್ಕೆ ಆಗುವುದಿಲ್ಲ ಹಿಂದೆ ಪ್ರಾರಂಭಿಸಿ ಡ್ರಿಲ್ ಮಾಡಿರತಕ್ಕಂಥ ಕೆಲಸವನ್ನು ನೋಡಿ ಅವುಗಳಿಗೆ ಪಂಪ್‌ಸೆಟ್ ಎನರ್ಜೈಜೇಷನ್ ಮಾಡಿ ಸಿವಿಲ್ ವರ್ಕ್ಸ್ ಮಾಡಿ ಕೊಡತಕ್ಕಂಥ ಕಾರಣದಿಂದ ಹೆಚ್ಚು ಹಣ ಕೊಡುತ್ತಿದ್ದೇವೆ.

ಅಧ್ಯಕ್ಷರು : ವರ್ಲ್ಡ್ ಬ್ಯಾಂಕ್‌ನಿಂದ ಬರುತ್ತದೆ ಅಲ್ಲ, ಅದನ್ನು ಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಹೊಸ ಯೋಜನೆಯನ್ನು ವಿಶ್ವಬ್ಯಾಂಕ್ ಏಡ್‌ನಿಂದ ಹೆಚ್ಚು ಹಣವನ್ನು ಪಡೆದು ಮಾಡೋಣವೆಂದು ನಾವು ಸಿದ್ಧಪಡಿಸುತ್ತಿದ್ದೇವೆ. ಅದನ್ನು ನಾನು ಮುಂದೆ ಮಾಡಿ ಹಣ ಕೊಡಿಸುತ್ತೇನೆ. ಆ ಯೋಜನೆಯಲ್ಲಿ ಹೆಚ್ಚು ಕೊಡಬೇಕೆಂದು ಇದೆ.

ಮೈಸೂರು ನಗರದಲ್ಲಿ ಎ.ಡಿ.ಬಿ. ಸಾಲದ ವತಿಯಿಂದ ನಡೆಯುವ ಕಾಮಗಾರಿಗಳ ವಿವರ

552 - ಶ್ರೀ ಎ. ರಾಮದಾಸ್ (ಕೃಷ್ಣರಾಜಾ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಮೈಸೂರು ಮಹಾನಗರದಲ್ಲಿ ಎ.ಡಿ.ಬಿ. ಸಾಲದ ವತಿಯಿಂದ ಯಾವ ಯಾವ ಕಾಮಗಾರಿ ನಡೆಯುತ್ತಿದೆ? ಒಟ್ಟು ಕಾಮಗಾರಿಗಳ ಮೊತ್ತ ಎಷ್ಟು? ವಿವರ ನೀಡುವುದು?*
2. *ಕಾಮಗಾರಿ ಎಂದು ಪ್ರಾರಂಭವಾಯಿತು? ಯಾವಾಗ ಮುಗಿಯಬೇಕಿತ್ತು? ಎಲ್ಲಾ ಕಾಮಗಾರಿ ಮುಗಿದಿದೆಯೇ? ಹಾಗಿಲ್ಲದಿದ್ದಲ್ಲಿ ಯಾವಾಗ ಮುಗಿಯುತ್ತದೆ?*
3. *ಕಾಮಗಾರಿಗಳು ಕಳಪೆ ಮಟ್ಟದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು?*
4. *ನಿಗದಿತ ಅವಧಿಯೊಳಗೆ ಕಾಮಗಾರಿಯನ್ನು ನಿಯಮಿತ ಗುಣಮಟ್ಟದಲ್ಲಿ ಮಾಡದ ಕಂಟ್ರಾಕ್ಟರ್ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :